(ಇಂದು ದಿನಾಂಕ 14-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಮ್.ಎನ್.ಎಸ್. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಹೊಳೆಗದ್ದೆ ಗ್ರಾಮದ ಮ್ಯೂಟೇಶನ್ ಎಂಟ್ರಿ 54/2018 ರ ಹಕ್ಕು ಪತ್ರಿಕೆಯ ಯಥಾ ನಕಲನ್ನು ನಿ.ಪಿ. 1 ಎಂದು, ಎಂ. ಆರ್ ನಂ. 43/2005-06 ರ ದೃಢೀಕೃತ ಪ್ರತಿಯನ್ನು ನಿ.ಪಿ. 2 ಎಂದು, ಹೊಳೆಗದ್ದೆ ಗ್ರಾಮದ ಸ.ನಂ. 353 ಹಿಸ್ಸಾ 1 ಅ ರ ಪಹಣಿ ಪತ್ರಿಕೆಯನ್ನು ನಿ.ಪಿ. 3 ಎಂದು, ಎಫ್ ಡಿ ಪಿ ನಂ. 16/2012 ರ ಅರ್ಜಿದಾರರು ಹಾಗೂ ಎದ್ರುದಾರರು ಸೇರಿ ಸಲ್ಲಿಸಿದ ರಾಜೀ ಅರ್ಜಿಯ ದೃಢೀಕೃತ ಪ್ರತಿಯನ್ನು ನಿ.ಪಿ. 4 ಎಂದು, ದಿಃ 08-11-2016 ರಂದು ಎಫ್ ಡಿ ಪಿ ನಂ. 16/2012 ರಲ್ಲಿ ಆದ ಅಂತಿಮ ರಾಜೀ ಡಿಕ್ರಿಯ ದೃಢೀಕೃತ ಪ್ರತಿಯನ್ನು ನಿ.ಪಿ. 5 ಎಂದು, ದರಖಾಸ್ತ ನಂ. 74/2017 ನೇದರಲ್ಲಿ ಸಲ್ಲಿಸಿದ ತಿದ್ದುಪಡಿ ಅಮಲ್ಜಾರಿ ಅರ್ಜಿಯ ದೃಢೀಕೃತ ಪ್ರತಿಯನ್ನು ನಿ.ಪಿ. 6 ಎಂದು, ದರಖಾಸ್ತ ನಂ. 74/2017 ರಲ್ಲಿ ದಿಃ 24-01-2020 ರಂದು ತಯಾರಿಸಿದ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನಿ.ಪಿ. 7 ಎಂದು, ದರಖಾಸ್ತ ನಂ. 74/2017 ರಲ್ಲಿ ದಿಃ 24-01-2020 ರಂದು ಕಬ್ಜಾ ಕೊಟ್ಟು ತಯಾರಿಸಿದ ಕಬ್ಜಾ ರಶೀದಿಯ ದೃಢೀಕೃತ ಪ್ರತಿಯನ್ನು ನಿ.ಪಿ. 8 ಎಂದು, ವಾದಿಯು 1 ನೇ ಪ್ರತಿವಾದಿಯವರಿಗೆ ದಿಃ 05-12-2020 ರಂದು ಸಲ್ಲಿಸಿದ ವಿನಂತಿ ಅರ್ಜಿಯ ಪ್ರತಿಯನ್ನು ನಿ.ಪಿ. 9 ಎಂದು, ದಿಃ 18-01-2021 ರಂದು 1 ನೇ ಪ್ರತಿವಾದಿಯವರು ವಾದಿಗೆ ನೀಡಿದ ಹಿಂಬರಹವನ್ನು ನಿ.ಪಿ.

10 ಎಂದು, ದಿಃ 23-01-2021 ರಂದು 1 ನೇ ಪ್ರತಿವಾದಿಯವರಿಗೆ ಸಲ್ಲಿಸಿದ ವಿನಂತಿ ಅರ್ಜಿಯ ಪ್ರತಿಯನ್ನು ನಿ.ಪಿ. 11 ಎಂದು, ದಿಃ 05-11-2022 ರಂದು 1 ರಿಂದ 3ನೇ ಪ್ರತಿವಾದಿಯವರಿಗೆ ಸಿ ಪಿ ಸಿ ಕಲಂ 80 ರನ್ವಯ ವಕೀಲರ ಮೂಲಕ ನೀಡಿದ ನೊಟೀಸಿನ ಪ್ರತಿಯನ್ನು ನಿ.ಪಿ. 12 ಎಂದು, 3 ಅಂಚೆ ರಶೀದಿಗಳನ್ನು ಕ್ರಮವಾಗಿ ನಿ.ಪಿ. 13 ರಿಂದ 15 ಎಂದು, 3 ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿ.ಪಿ. 16 ರಿಂದ 18 ಎಂದು, ದಿಃ 31-01-2023 ರಂದು 1 ನೇ ಪ್ರತಿವಾದಿಯವರು ವಾದಿ ಪರ ವಕೀಲರಿಗೆ ನೀಡಿದ ಉತ್ತರವನ್ನು ನಿ.ಪಿ. 19 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ